**<u>ಮೆಃ ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ ನ್ಯಾಯಾಲಯ, ಮುಧೋಳ</u>**

C.C.No. 849/2024.
CW4/PW1.

| | |
|---|---|
| ಹೆಸರು | ಮಾರುತಿ ಮಾದರ |
| ತಾಯಿಯ ಹೆಸರು | ಸುಮೀತ್ರಾ |
| ವಯಸ್ಸು | 46 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸಸ್ಥಳ | ಮರೆಗುದ್ದಿ ಗ್ರಾಮ, ತಾಃ ಜಮಖಂಡಿ |

**ದಿನಾಂಕಃ 16-06-2026 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋದಿಸಲಾಯಿತು.**

**<u>ಮುಖ್ಯ ವಿಚಾರಣೆಃ- ಎ.ಪಿ.ಪಿ ರವರಿಂದ.</u>**

ನನಗೆ ಚಾಸಾ-5 ರವರ ಪರಿಚಯ ಇರುತ್ತದೆ. ನನ್ನ ಸಮಕ್ಷಮ ಪೋಲಿಸರು ಯಾವುದೇ ಘಟನಾ ಸ್ಥಳದ ಪಂಚನಾಮೆ ಮತ್ತು ವಾಹನ ಜಪ್ತಿ ಪಂಚನಾಮೆ ಮಾಡಿ ಯಾವುದೇ ವಸ್ತುಗಳನ್ನು ಜಪ್ತಿಪಡಿಸಿಕೊಂಡಿರುವುದಿಲ್ಲ. ಈಗ ಸುಮಾರು 02 ವರ್ಷಗಳ ಹಿಂದೆ ನಾನು ಪೋಲಿಸ ಠಾಣೆಗೆ ಹೋದಾಗ ಪೋಲಿಸರು ಎರಡು ದಾಖಲೆಗಳ ಮೇಲೆ ನನ್ನ ಸಹಿಗಳನ್ನು ತೆಗೆದುಕೊಂಡಿರುತ್ತಾರೆ.

ಸಾಕ್ಷಿಯು ಈಗ ಎರಡು ದಾಖಲೆಗಳಾದ ಗುನ್ನೆ ಸ್ಥಳ ಪಂಚನಾಮೆ ಮತ್ತು ವಾಹನ ಜಪ್ತ ಪಂಚನಾಮೆ ಮೇಲೆ ಇರುವ ತನ್ನ ಎರಡು ಸಹಿಗಳನ್ನು ನೋಡಿ ಗುರುತಿಸಿದ್ದು, ಸದರಿ ಪಂಚನಾಮೆಗಳನ್ನು ನಿಪಿ-1 ಮತ್ತು 2 ಎಂದು ಗುರುತಿಸಿ, ಅವುಗಳ ಮೇಲೆ ಇರುವ ಸಾಕ್ಷಿಯ ಸಹಿಗಳನ್ನು ಈಗ ನಿಪಿ-1(ಎ) ಮತ್ತು ನಿಪಿ-2(ಎ) ಎಂದು ಗುರುತಿಸಲಾಯಿತು. ನಿಪಿ-1 ಮತ್ತು 2 ರಲ್ಲಿ ಬರೆದಿರುವ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

***(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಸ.ಸ.ಅ ರವರು ವಿನಂತಿಸಿದ್ದರಿಂದ ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)***

**<u>ಪಾಟಿ ಸವಾಲು ಃ- ಎ.ಪಿ.ಪಿ ರವರಿಂದ.</u>**

ದಿನಾಂಕ 11.02.2024 ರಂದು ಮುಂಜಾನೆ 11-00 ಗಂಟೆಯಿಂದ 12-00 ಗಂಟೆಯವರೆಗೆ ಪೋಲಿಸರು ನನಗೆ ಮತ್ತು ಚಾಸಾ-5 ರವರನ್ನು ಪಂಚರನ್ನಾಗಿ ಮುಧೋಳ -ಜಮಖಂಡಿ ರಸ್ತೆಯ ಮೇಲೆ ಮಾಲಾಪುರ ಗ್ರಾಮದ ಹದ್ದಿಯಲ್ಲಿರುವ ಎಲ್ಶೆಟಿ ವೈನ್ ಪ್ಯಾಕ್ಟರಿ ಹತ್ತಿರ ಕರೆಯಿಂದ ನಿಪಿ-1 ರಂತೆ ಚಾಸಾ-1 ರವರು ತೋರಿಸಿದ ಘಟನಾ ಸ್ಥಳದ ಪಂಚನಾಮೆ ಮಾಡಿ ಅದನ್ನು ಓದಿ ಹೇಳಿದ ನಂತರ ಅದು ಸರಿ ಇರುತ್ತದೆ ಎಂದು ನಾವು ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

ಈಗ ಸಾಕ್ಷಿಗೆ ಎರಡು ಭಾವಚಿತ್ರಗಳನ್ನು ತೋರಿಸಲಾಗಿ ಅವುಗಳಲ್ಲಿ ತಾನು ಇರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಭಾವಚಿತ್ರಗಳನ್ನು ಈಗ ನಿಪಿ-3 ಮತ್ತು 4 ಎಂದು ಗುರುತಿಸಲಾಯಿತು. ನಿಪಿ-3 ಮತ್ತು 4 ಭಾವಚಿತ್ರಗಳನ್ನು ಪೋಲಿಸರು ನಿಪಿ-1 ಗುನ್ನೆ ಸ್ಥಳ ಪಂಚನಾಮೆ ಕಾಲಕ್ಕೆ ತೆಗೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ಅದೇ ರೀತಿ ಸದರಿ ದಿನಾಂಕದಂದು ಮದ್ಯಾಹ್ನ 12-30 ಗಂಟೆಯಿಂದ 1-15 ಗಂಟೆಯವರೆಗೆ ಪೋಲಿಸರು ನನಗೆ ಮತ್ತು ಚಾಸಾ-5 ರವರನ್ನು ಪೋಲಿಸ ಠಾಣಾ ಆವರಣದಲ್ಲಿ ಕರೆಯಿಸಿ, ಅಲ್ಲಿ ಚಾಸಾ-14 ರವರು ಹಾಜರ ಮಾಡಿದ ಮೋಟಾರ ಸೈಕಲ ನಂ.ಕೆಎ-48/ಇಡಿ-3361 ಮತ್ತು ಕೆಎ-48/ಕೆ-8278 ನೇದ್ದವುಗಳ ಪಂಚನಾಮೆಯನ್ನು ನಿಪಿ-2 ರಂತೆ ಮಾಡಿ ಸದರಿ ಮೋಟಾರ ಸೈಕಲಗಳನ್ನು ಜಪ್ತಿಪಡಿಸಿಕೊಂಡರು ಎಂದರೆ ಸರಿಯಲ್ಲ.

ಈಗ ಸಾಕ್ಷಿಗೆ ಎರಡು ಭಾವಚಿತ್ರಗಳನ್ನು ತೋರಿಸಲಾಗಿ ಅವುಗಳಲ್ಲಿ ತಾನು ಇರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಭಾವಚಿತ್ರಗಳನ್ನು ಈಗ ನಿಪಿ-5 ಮತ್ತು 6 ಎಂದು ಗುರುತಿಸಲಾಯಿತು. ನಿಪಿ-5 ಮತ್ತು 6 ಭಾವಚಿತ್ರಗಳನ್ನು ಪೋಲಿಸರು ನಿಪಿ-2 ವಾಹನ ಜಪ್ತ ಪಂಚನಾಮೆ ಕಾಲಕ್ಕೆ ತೆಗೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ನಿಪಿ-1 ಮತ್ತು 2 ರಲ್ಲಿ ಬರೆದಿರುವ ಸಂಗತಿಗಳ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿ ಪರ ವಕೀಲರು ಪಾಟಿ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

Sd/-
ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ ಮುಧೋಳ.

ಸಾಕ್ಷಿಯ ಸಹಿ

LAGAMA SHIVANAPPA HUKKERI

Digitally signed by LAGAMA SHIVANAPPA HUKKERI
Date: 2026.07.07 10:56:51 +0530